ತಂತಿ ವಿಳಾಸ: ಯೂನಿರ್‌ಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ 23.01.2023

ಸಂಖ್ಯೆ:ಜಿಎಲ್5/98(1)/2022-23

## ಸುತ್ತೋಲೆ

ವಿಷಯ: **"75ನೇ ಸರ್ವೋದಯ ದಿನಾಚರಣೆ"** ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ: ಗೌರವ ನಿರ್ದೇಶಕರು, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿಭವನ, ಮಾನಸಗಂಗೋತ್ರಿ, ಮೈಸೂರು ಇವರ ಪತ್ರ ಸಂಖ್ಯೆ:ಜಿಬಿ/ಎಂಜಿಎಂ/477/2022-23,ದಿನಾಂಕ: 19.01.2023

:-:

ದಿನಾಂಕ: 30.01.2023 ರಂದು ಬೆಳಗ್ಗೆ 10.30 ಗಂಟೆಗೆ ಮಾನಸಗಂಗೋತ್ರಿಯ ಗಾಂಧಿ ಭವನದ ಸಭಾಂಗಣದಲ್ಲಿ **"75ನೇ ಸರ್ವೋದಯ ದಿನಾಚರಣೆ"** ಕಾರ್ಯಕ್ರಮವನ್ನು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೊತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ ನಿರ್ದೇಶಕರು /ಬಟವಾಡೆ ಅಧಿಕಾರಿಗಳು/ ಅಧ್ಯಾಪಕ/ ಅಧ್ಯಾಪಕೇತರ ಉದ್ಯೋಗಿಗಳು ಭಾಗವಹಿಸುವಂತೆ ತಿಳಿಸಲಾಗಿದೆ. ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು ಬಿ.ಇಡಿ, ಕಾಲೇಜುಗಳ ಪ್ರಾಂಶುಪಾಲರುಗಳ ನೇತೃತ್ವದಲ್ಲಿ 75ನೇ ಸರ್ವೋದಯ ದಿನಾಚರಣೆಯನ್ನು ಆಚರಿಸುವುದರ ಜೊತೆಗೆ ಬೆಳಗ್ಗೆ 11.00 ಗಂಟೆಗೆ ಆಯಾ ಸಂಸ್ಥೆಯ ಮುಖ್ಯಸ್ಥರು ಸರ್ವಧರ್ಮ ಸಂರಕ್ಷಣಾ ಪ್ರತಿಜ್ಞಾ ವಿಧಿಯನ್ನು ಬೋಧಿಸುವಂತೆ ತಿಳಿಸಲಾಗಿದೆ.

24/1/2023

ಕುಲಸಚಿವ

23-1-2023

ಇವರಿಗೆ:

1. ಎಲ್ಲಾ ಸ್ನಾತಕೊತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ ನಿರ್ದೇಶಕರು, ಮಾನಸಗಂಗೋತ್ರಿ, ಮೈಸೂರು
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ,ಹಾಸನ, ಮಂಡ್ಯ ಮತ್ತು ಚಾಮರಾಜನಗರ
3. ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
4. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಅಧೀನ/ವ್ಯಾಪ್ತಿಗೊಳ್ಳಪಟ್ಟ ಕಾಲೇಜುಗಳು ಹಾಗೂ ಬಿ.ಇಡ್ ಕಾಲೇಜುಗಳು
6. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈವಿವಿ, ಮೈಸೂರು.
7. ಕಛೇರಿ ಪ್ರತಿ.
8. ನಿರ್ದೇಶಕರು, ಪಿ.ಎಂ.ಇ.ಬಿ, ಗಾಂಧಿ ಭವನ, ಮಾನಸಗಂಗೋತ್ರಿ, ಮೈಸೂರು – ಸದರಿ ಪತ್ರವನ್ನು [illegible]

ಪು.ತಿ.ನೋ

# “ಸರ್ವಧರ್ಮ ಸಂರಕ್ಷಣಾ ಪ್ರತಿಜ್ಞೆ”

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹತ್ಯೆಗೆ ಗುರಿಯಾದ ಹುತಾತ್ಮರ ದಿನವಾದ ಇಂದು, ನಾವು ಈ ಪ್ರತಿಜ್ಞೆಯನ್ನು ಆತ್ಮಸಾಕ್ಷಿಯಾಗಿ ಸ್ವೀಕರಿಸುತ್ತಾ ವಿವಿಧ ಧರ್ಮಗಳನ್ನು ಮತ್ತು ಸಂಸ್ಕೃತಿಯನ್ನು ಒಳಗೊಂಡಿರುವ ನಮ್ಮ ದೇಶದಲ್ಲಿನ ಎಲ್ಲಾ ಧರ್ಮಗಳಿಗೂ, ಸಂಸ್ಕೃತಿಗಳಿಗೂ ಸಮಾನ ಗೌರವ ಸಲ್ಲಿಸುತ್ತೇವೆ.

ಎಲ್ಲಾ ಧರ್ಮೀಯರ ನಂಬಿಕೆ ಮತ್ತು ಆಚರಣೆಗಳಿಗೆ ಸಮಾನ ಅವಕಾಶ ಸಲ್ಲುವಂತೆ ನಾವೆಲ್ಲರೂ ಶ್ರದ್ಧಾಪೂರ್ವಕವಾಗಿ ಶ್ರಮಿಸುತ್ತೇವೆ ಎಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇವೆ.